- ❖ ರಾಜ್ಯ ಸರ್ಕಾರದ ವತಿಯಿಂದ 1,94,749 ರೂಪಾಯಿಗಳನ್ನು ಹೆಚ್1 ಎನ್1 ಸೋಂಕು ನಿಯಂತ್ರಣಕ್ಕಾಗಿ ಬಿಡುಗಡೆಯಾಗಿದ್ದು, ಟ್ರಿಪಲ್ ಲೇಯ್ ಮಾಸ್ಕ್, ಎನ್–95 ಮಾಸ್ಕ್ ಹಾಗೂ ಪಿ.ಪಿ.ಇ ಗಳನ್ನು ಖರೀದಿಸಲಾಗಿದೆ. ಹಾಗೂ
- ❖ ಐದು ಲಕ್ಷ ರೂಪಾಯಿಗಳನ್ನು NIMHANS ಪ್ರಯೋಗಾಲಯಕ್ಕೆ Test kit ಗಳನ್ನು ಖರೀದಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಊ) ವಿವಿಧ ಆಸ್ಪತ್ರೆಗಳಲ್ಲಿ ಮಂಜೂರಾದ ಗ್ರೂಪ್ 'ಡಿ' ಹುದ್ದೆಗಳಲ್ಲಿ ಶೆ.30% ಹುದ್ದೆಗಳನ್ನು ಖಾಲಿ ಇಟ್ಟು ಈ ಹುದ್ದೆಗಳ ವೇತನ ಭತ್ಯೆಗಳಿಗೆ ಸಮನಾದ ಮೊತ್ತಕ್ಕೆ ಹೊರ ಗುತ್ತಿಗೆ ಆಧಾರದಲ್ಲಿ (Non-Clinical Services) ಆಸ್ಪತ್ರೆಯ ಸುಚಿತ್ವ ಕಾಪಾಡಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಘನ ತಾಜ್ಯ ಮತ್ತು ದ್ರವ ತಾಜ್ಯವನ್ನು ತ್ಯಾಜ್ಯವನ್ನು Prevention and Control of Pollution Act 1974 ಕಾಯ್ದೆಯಂತೆ ವಿಲೇವಾರಿ ಮಾಡಲಾಗುತ್ತಿದೆ.

ತಾಂಡಾಗಳನ್ನು ಅಭಿವೃದ್ಧಿ ಪಡಿಸುವುದು

478(311); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ).

ಅ) ಕರ್ನಾಟಕ ರಾಜ್ಯದಲ್ಲಿರುವ ತಾಂಡಾಗಳ ಸಂಖ್ಯೆ ಎಷ್ಟು; ಅವುಗಳ ಅಭಿವೃದ್ಧಿಗೆ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಹಾಗೂ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾರ್ಪಾಡು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ನಿಗಮವು ಕೈಗೊಂಡ ಸಮೀಕ್ಷಾ ವರದಿಯನ್ವಯ ಕರ್ನಾಟಕ ರಾಜ್ಯದಲ್ಲಿ ಒಟ್ಟು 3361 ತಾಂಡಾಗಳಿದ್ದು, ನಿಗಮವು ತಾಂಡಾಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಸೇವಾಲಾಲ್ ಸಮುದಾಯ/ಬಂಜಾರ ಭವನ ನಿರ್ಮಾಣದ ಕಾಮಗಾರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿರುವ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾರ್ಪಾಟು ಮಾಡಲು ಕ್ರಮ ಕೈಗೊಳ್ಳಲಾಗುವುದು

ಆಸ್ಪತ್ರೆಯ ದುರಸ್ಥಿ ಹಾಗೂ ನಿರ್ವಹಣೆ

479(934); ಶ್ರೀ. ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿನ ಸರ್ಕಾರಿ 100 ಹಾಸಿಗೆಯ ಆಸ್ಪತ್ರೆಯ ಕಟ್ಟಡದ ಮೇಲ್ಛಾವಣಿ ಶಿಥಿಲಗೊಂಡು ಬೀಳುವ ಹಾಗೂ ಸೋರುತ್ತಿರುವುದು, ಕಟ್ಟಡದ ದುರಸ್ಥಿ ಹಾಗೂ ನವೀಕರಣ ಮಾಡುವುದು ಅವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಟ್ಟಡದ ನವೀಕರಣ ಹಾಗೂ ದುರಸ್ಥಿಗಾಗಿ 1 ಕೋಟಿ ರೂ.ಗಳ ಅಂದಾಜು ಪಟ್ಟಿ ಪ್ರಸ್ತಾವನೆ ಸರ್ಕಾರದ ಮುಂದಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ತಕ್ಷಣ ಕಟ್ಟಡ ಹಾಗೂ ನವೀಕರಣಕ್ಕೆ ಧನ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು?

ಶ್ರೀ. ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಈ ಕಟ್ಟಡದ ನವೀಕರಣ ಹಾಗೂ ದುರಸ್ತಿಗಾಗಿ ₹ 1 20 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.